# ಅಂಗೈಯಲ್ಲಿ ಅರಮನೆ

## ಬಸ್ ಹೊಂಟಾತಲ್ರಿ!

ನಾನಾಗ ಕಲಬುರಗಿಯಲ್ಲಿ ಸ್ನಾತಕೋತ್ತರ ಪದವಿ ಓದುತ್ತಿದ್ದ ಸಮಯ. ನಾನು ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿದ್ದೆ. ಸಿಟಿಗೆ ಹೋಗಲು ಸಿಟಿ ಬಸ್ ಸ್ಟ್ಯಾಂಡ್‌ನಲ್ಲಿ ಬಸ್‌ಗಾಗಿ ಕಾಯುತ್ತಿದ್ದೆ. ಬಹಳ ಹೊತ್ತಾದರೂ ಬಸ್ ಬರಲಿಲ್ಲ. ಜೊತೆಗಿದ್ದವರನ್ನು ಕೇಳಲಾಗಿ ಅವರು 'ಬಸ್ ಹೊಂಟಾತಲ್ರಿ' ಎಂದು ಹೇಳಿದರು.

ಬಹಳ ಹೊತ್ತಿನಿಂದ ಇಲ್ಲೇ ಕಾಯುತ್ತಾ ಇದ್ದೇನೆ, ಯಾವಾಗ ಬಸ್ ಹೋಯಿತು ನಾನು ನೋಡಲೇ ಇಲ್ಲವಲ್ಲ ಎಂದುಕೊಂಡು ಬಸ್ ಯಾವಾಗ ಹೋಯಿತು ಎಂದಾಗ, ಅವರು 'ಅಲ್ಲಿ ಬಸ್ ಹೊಂಟಾತಲ್ರಿ' ಎಂದು ನಮ್ಮ ಕಡೆಗೆ ಬಸ್ ಅನ್ನು ತೋರಿಸಿದರು.

ಬಳ್ಳಾರಿ ಜಿಲ್ಲೆಯವನಾದ ನನಗೆ ಬಸ್ ಬರುತ್ತಿರುವುದಕ್ಕೆ ಹೊಂಟಾತಲ್ರಿ ಎಂದು



ಹೇಳುತ್ತಾರಲ್ಲ ಎಂದು ತಿಳಿದು ನಗುಬಂತು. ಹಾಗೇ ಮಳೆ ಬರುವುದಕ್ಕೂ ಇಲ್ಲಿ ಮಳೆ ಹೊಂಟಾತಲ್ರಿ ಎನ್ನುತ್ತಾರೆಂದು ನಂತರ ತಿಳಿಯಿತು.

**ಬಿ. ಬಸವರಾಜ**

---

## ರಾತ್ರಿಯೆಲ್ಲ ನಿದ್ದೆ ಬರಲ್ಲ

ಪತಿ ಆಕಸ್ಮಿಕ ಅಪಘಾತದಲ್ಲಿ ನಿಧನರಾದಾಗ, ಆತನ ಪತ್ನಿ ನೂರು ಜನರಿಗೆ ಕೇಳುವಂತೆ ಜೋರಾಗಿ ಅಳುತ್ತಿದ್ದಳು. ಆಗ ಅಕ್ಕಪಕ್ಕದ ಜನರೆಲ್ಲ ಬಂದು 'ಏನಮ್ಮ, ಹೀಗೆ ಜೋರಾಗಿ ಅಳುತ್ತಾ ಇದ್ದೀಯಾ ಏನಾಗಿದೆ?' ಎಂದು ಕೇಳಿದಾಗ, ಪತ್ನಿ 'ನನ್ನ ಪತಿ ಅಪಘಾತದಲ್ಲಿ ನಿಧನರಾಗಿದ್ದಾರೆ. ಅದಕ್ಕೆ ಅಳ್ತಾ ಇದ್ದೇನೆ' ಎಂದಳು.

ಆಗ ಅಕ್ಕಪಕ್ಕದವರು 'ಅಲ್ಲಮ್ಮ, ನಿನಗೆ ಬುದ್ಧಿ ಇದೆಯಾ ವರ್ಷದ 365 ದಿನವೂ ಗಂಡನೊಡನೆ ಬೆಳಗ್ಗೆ ರಾತ್ರಿ ಜಗಳ ಆಡ್ತಾಯಿದ್ದೆಯಲ್ಲ ಅದು ಏರಿಯಾದ ಜನರಿಗೆಲ್ಲ ಗೊತ್ತಿದೆ. ಈಗ ಅಳ್ತಾ ಇದ್ದೀಯಾ' ಎಂದರು.

ಆಗ ಪತ್ನಿ, 'ಗಂಡನ ಜೊತೆ ದಿನವೂ ಜಗಳವಾಡದಿದ್ದರೆ ನನಗೆ ನಿದ್ದೆ ಇಲ್ಲ, ಮನಃಶಾಂತಿ ಇಲ್ಲ. ತವರು ಮನೆಗೆ ಬೆಳಗ್ಗೆ ಹೋದರೂ ತಪ್ಪದೇ ಸಂಜೆ ವೇಳೆಗೆ ಮನೆಗೆ ಜಗಳವಾಡಲು ಬರ್ತಾ ಇದ್ದೆ. ಈಗ ನಾನು ಯಾರ ಜೊತೆ ಜಗಳ ಆಡಲಿ.



ಜಗಳವಾಡದಿದ್ದರೆ ನಿದ್ದೆ ಬರಲ್ಲ. ಅದಕ್ಕೆ ನಾನು ಅಳ್ತಾ ಇದ್ದೇನೆ' ಎಂದಾಗ ಈ ಮಾತನ್ನು ಕೇಳಿದ ಅಕ್ಕಪಕ್ಕದವರು ಆಶ್ಚರ್ಯಪಟ್ಟರು.

**ವೇಣುಗೋಪಾಲ್ ಸಿ.**